# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1399 |
| ಸದಸ್ಯರ ಹೆಸರು | : ಡಾ: ಎಂ.ಜಿ.ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 18.12.2025 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರಂಜಾ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಈ ಯೋಜನೆಯ ಪ್ರಾರಂಭಿಕ ಅಂದಾಜು ಮೊತ್ತ ಎಷ್ಟು ಮತ್ತು ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಯೋಜಿಸಲಾಗಿದೆ; | ರೂ.9.90 ಕೋಟಿ ಅಂದಾಜು ಮೊತ್ತದ ಕಾರಂಜಾ ನೀರಾವರಿ ಯೋಜನೆಯನ್ನು 1969-70ರಲ್ಲಿ ಪ್ರಾರಂಭಿಸಲಾಗಿದ್ದು, 35,614 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿತ್ತು. ಆದರೆ, ಯೋಜನಾ ಪ್ರದೇಶದಲ್ಲಿ land ueನಲ್ಲಿನ ಬದಲಾವಣೆ ಮತ್ತು ನಗರೀಕರಣ ಕಾರಣಗಳಿಂದಾಗಿ ನೀರಾವರಿ ಸಾಮರ್ಥ್ಯವನ್ನು 29,227 ಹೆಕ್ಟೇರ್ ಆಗಿ ಪರಿಷ್ಕರಿಸಲಾಗಿದೆ.<br>ಸದರಿ ಯೋಜನೆಯ ರೂ.635.18 ಕೋಟಿ ಅಂದಾಜು ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ:02.01.2015ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |
| ಆ) | ಪ್ರಸ್ತುತ ಈ ಯೋಜನೆ ಅನುಷ್ಠಾನಕ್ಕೆ, ಇಲ್ಲಿವರೆಗೆ ಎಷ್ಟು ಮೊತ್ತದ ಹಣವನ್ನು ವೆಚ್ಚ ಮಾಡಲಾಗಿದೆ; ಹಾಗೂ ಇಲ್ಲಿಯವರೆಗೆ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕುತ್ತಿದೆ; | ಸದರಿ ಯೋಜನೆಗೆ ಇದೂವರೆಗೆ ರೂ.723.13 ಕೋಟಿ ವೆಚ್ಚ ಭರಿಸಲಾಗಿದೆ ಹಾಗೂ 27,266 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. |
| ಇ) | ಈ ಯೋಜನೆ ಆರಂಭಿಕ ಅಂದಾಜು ಮೊತ್ತಕ್ಕಿಂತ ಹೆಚ್ಚು ಹಣವನ್ನು ವೆಚ್ಚ ಮಾಡಿದ್ದರೂ ಸಹ ನಿಗದಿತ ಪ್ರಮಾಣದ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಈ) | ಈ ಯೋಜನೆ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದೆ ಇರುವುದು ಹಾಗೂ ನಿಗದಿತ ಪ್ರಮಾಣದ ಜಮೀನುಗಳಿಗೆ ನೀರಾವರಿ ಸೌಲಭ್ಯವು ಸಹ ದೊರಕದೇ ಇರಲು ಕಾರಣಗಳೇನು; | ಕಾಮಗಾರಿ ಅನುಷ್ಠಾನ ಸಂದರ್ಭದಲ್ಲಿ ರೈತರು ಭೂಸ್ವಾಧೀನಕ್ಕೆ ತಕರಾರು ಮಾಡಿರುವುದರಿಂದ ಹಾಗೂ ಇತ್ಯಾದಿ ಕಾರಣಗಳಿಂದಾಗಿ ನಿಗದಿತ ಅವಧಿಯಲ್ಲಿ ಯೋಜನೆಯು ಪೂರ್ಣಗೊಂಡಿರುವುದಿಲ್ಲ.<br>ಮುಂದುವರೆದು, ಕೆಲವು ಭಾಗಗಳಲ್ಲಿ (ಅತಿವಾಳ್ ಐತ ನೀರಾವರಿ ಒಳಗೊಂಡಂತೆ) ರೈತರು ಬೋರ್‌ವೆಲ್ ಗಳ ಮೂಲಕ ಸ್ವಂತ ನೀರಾವರಿ ಮಾಡಿಕೊಂಡಿರುವುದರಿಂದ ಸುಮಾರು 1961 ಹೆಕ್ಟೇರ್ ಪ್ರದೇಶವನ್ನು ಯೋಜನೆಯಿಂದ ಕೈಬಿಡಲಾಗಿದೆ. |
| ಉ) | ಈ ಯೋಜನೆಯನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮವೇನು. | ಸದರಿ ಯೋಜನೆಯನ್ನು ಮಾರ್ಚ್-2023ರಲ್ಲಿ ಪೂರ್ಣಗೊಳಿಸಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಊ) | ಈ ಯೋಜನೆಯ ಸಲುವಾಗಿ ಭೂಮಿ ಮನೆ ಮಠಗಳನ್ನು ಕಳೆದುಕೊಂಡಿರುವ ರೈತರಿಗೆ ಪುನರ್ವಸತಿ ಸೌಲಭ್ಯ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; ಎಷ್ಟು ಕುಟುಂಬಗಳನ್ನು ಪುನರ್ವಸತಿ ಸೌಲಭ್ಯ ಕಲ್ಪಿಸುವ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿದೆ? | ಯೋಜನೆಯಿಂದ ಬಾಧಿತರಾದ 2273 ಕುಟುಂಬಗಳಿಗೆ 9 ಪುನರ್ ವಸತಿ ಕೇಂದ್ರಗಳನ್ನು ನಿರ್ಮಿಸಿ, ಪುನರ್ ವಸತಿ ಸೌಲಭ್ಯ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ, ಸ್ಥಳಾಂತರಗೊಳಿಸಲು ರೂ.20.93 ಲಕ್ಷ ವೆಚ್ಚ ಭರಿಸಲಾಗಿದೆ. |

**ಸಂಖ್ಯೆ:ಜಸಂಇ 181 ಎಂಎಲ್‌ಎ 2025**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**